ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 561/2023

(ಫ್ರಾಸಾ-2 ಚಾಸಾ-2)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 10.09.2024

| | | |
|---|---|---|
| ಸಾಕ್ಷಿದಾರರ ಹೆಸರು | - | ಗಣೇಶ್ |
| ತಂದೆಯಿ ಹೆಸರು | - | ಕನ್ನೇಗೌಡ |
| ವಯಸ್ಸು | - | 41 ವರ್ಷ, |
| ಉದ್ಯೋಗ | - | ಅಡಿಗೆ ಕೆಲಸ |
| ವಾಸ | - | ದ್ವಾರಕನಗರ, ಹೆಸರಘಟ್ಟ ಮುಖ್ಯ ರಸ್ತೆ, |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಕಳೆದ ಏಳು ವರ್ಷಗಳಿಂದ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಹಿಮಾಲಯ ಡಾಬಾದಲ್ಲಿ ನಾನು ಅಡಿಗೆ ಕೆಲಸ ಮಾಡುತ್ತೇನೆ. ನನ್ನ ಕೆಲಸದ ಅವಧಿ ಬೆಳಗ್ಗೆ 11 ರಿಂದ ರಾತ್ರಿ 11 ಘಂಟೆ ಇರುತ್ತದೆ. ಚಾಸಾ-3 ಇವರು ಹಿಮಾಲಯ ಡಾಬಾದ ಮಾಲೀಕರು.

2. ದಿಃ13.01.2023 ರಂದು ನಾನು ಅಡಿಗೆ ಕೆಲಸ ಮುಗಿಸಿ ರಾತ್ರಿ 11.00 ಘಂಟೆಗೆ ಬೈಕ್ ನಲ್ಲಿ ಮನೆಗೆ ಹೊರಟು ಮೇನ್ ರೋಡಿಗೆ ಹೋದಾಗ ಒಬ್ಬ ವ್ಯಕ್ತಿಯು ಕೂಗಿಕೊಂಡು ಬಂದು ಡಾಬಾದ ಗೇಟ್ ಬಳಿ ಬಂದು ಬಿದ್ದನು. ನಾನು ವಾಪಸ್ಸು ಡಾಬಾದ ಬಳಿ ಬಂದು ನೋಡಿದಾಗ ಆತ ರಕ್ತದ ಮಡುವಿನಲ್ಲಿ ಬಿದ್ದಿದ್ದನು. ನಾನು ನಂತರ ಡಾಬಾದ ಒಳಗೆ ಹೋಗಿ ವಿಷಯವನ್ನು ಡಾಬಾದ ಮಾಲೀಕರಿಗೆ ತಿಳಿಸಿದೆನು. ಚಾಸಾ-3 ಇವರನ್ನು ಕರೆದುಕೊಂಡು ದ್ವಾರದ ಬಳಿ ಬಂದಾಗ ಇನ್ನೊಬ್ಬ ವ್ಯಕ್ತಿಯು ಸಹ ರಕ್ತದ ಮಡುವಿನಲ್ಲಿ ಬಂದು ಆತನ ಪಕ್ಕದಲ್ಲಿಯೇ ಬಿದ್ದಿದ್ದನು. ಚಾಸಾ-3 ಇವರು ಹೊಯ್ಸಳ ಪೋಲಿಸರಿಗೆ ಫೋನ್ ಮಾಡಿದ್ದು ಹೊಯ್ಸಳ ಪೋಲಿಸರು ಬಂದು ಇಬ್ಬರು ಗಾಯಾಳುಗಳನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ನಾನು ಮನೆಗೆ ಹೋದೆನು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಂಎನ್‌ವಿ</u>**

**<u>(ಪ್ರಧಾನ ಕಾನೂನು ಅಭಿರಕ್ಷಕರು) ವಕೀಲರಿಂದಃ</u>**

3. ನಾನು ಹಿಮಾಲಾಯ ಡಾಬಾದಲ್ಲಿ ಅಡಿಗೆ ಭಟ್ಟನಾಗಿ ಕೆಲಸ ಮಾಡುತ್ತಿರುವ ಬಗ್ಗೆ ಚಾಸಾ-3 ಇವರು ಗುರುತಿನ ಚೀಟಿಯನ್ನು ನೀಡಿರುತ್ತಾರೆ. ನಾನು ಗುರುತಿನ ಚೀಟಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ನಾನು ಕೆಲಸಕ್ಕೆ ಹೋಗಿ ಬರಲು ದ್ವಿಚಕ್ರ ವಾಹನವನ್ನೇ ಬಳಸುತ್ತೇನೆ. ನನ್ನ ದ್ವಿಚಕ್ರ ವಾಹನದ ನಂಬರ್ ಕೆಎ-04-ಜೆ-6611. ದಿಃ13.01.2023 ರಂದು 1 ನೇ ಅಸಾಮಿಯು ಕಿರುಚಾಡಿಕೊಂಡು ಬಂದು ನಮ್ಮ ಡಾಬಾದ ಬಳಿ ಬೀಳುವುದಕ್ಕಿಂತ ಮೊದಲು ಡಾಬಾದ ಬಳಿ ಯಾವುದೇ ಗಲಾಟೆ ನನಗೆ ಕಂಡುಬರಲಿಲ್ಲ. ಕಿರುಚಿಕೊಂಡು ಬಂದು ಬಿದ್ದ ವ್ಯಕ್ತಿ ಹಾಗೂ ನನ್ನ ಬೈಕಿನ ನಡುವೆ ಸುಮಾರು 20 ರಿಂದ 25 ಅಡಿ ಅಂತರ ಇತ್ತು. ಸದರಿ ವ್ಯಕ್ತಿ ಕಿರುಚಿಕೊಂಡ ಧ್ವನಿಯು ಸಾಮಾನ್ಯವಾಗಿ ಡಾಬಾದ ಒಳಗೆ ಇರುವ ವ್ಯಕ್ತಿಗೆ ಕೇಳಿಸುತ್ತಿತ್ತು ಎಂದರೆ ಸಾಕ್ಷಿ ಡಾಬಾದ ಗೇಟ್ ಮತ್ತು ಡಾಬಾದಾ ಮಧ್ಯ ಪಾರ್ಕಿಂಗ್ ಜಾಗ ಇರುವುದರಿಂದ ಕಿರುಚಾಡಿದ ಶಬ್ದ ಸ್ವಲ್ಪ ಕೇಳಿಸಬಹುದು. ರಾತ್ರಿಯ ಸಮಯವಾದುದ್ದರಿಂದ ಅಲ್ಲಿ ನಿಶ್ಯಬ್ದವಾಗಿತ್ತು. ರಾತ್ರಿಯ ಸಮಯವಾದ್ದರಿಂದ ನಿಶ್ಯಬ್ದ ಇರುವುರಿಂದ ಆತ ಕಿರುಚಿಕೊಂಡ ಶಬ್ದ ಬೇರೆಯವರಿಗೆ ಕೇಳಿಸಿತ್ತು ಎಂದು ಕೇಳಿದ ಪ್ರಶ್ನೆಗೆ ಸ್ವಲ್ಪ ಕೇಳಿಸಿರಬಹುದು ಆದರೆ ಡಾಬಾದಿಂದ ಯಾರೂ ಬಂದಿರಲಿಲ್ಲ ನಾನೇ ಮೊದಲು ನೋಡಿದ್ದು ಎಂದು ಹೇಳುತ್ತಾರೆ.

4. ನಾನು ಪೋಲಿಸರಿಗೆ ಕರೆ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಭಯವಾಗಿದ್ದರಿಂದ ಡಾಬಾದ ಒಳಗೆ ಹೋಗಿ ಮಾಲೀಕರಿಗೆ ಹೇಳಿದೆ ಎಂದು ಹೇಳುತ್ತಾರೆ. ಚಾಸಾ-3 ಇವರು ಯಾವ ಫೋನ್ ನಂಬರಿನಿಂದ ಪೋಲಿಸರಿಗೆ ಕರೆ ಮಾಡಿದ್ದರು ಎಂದು ನನಗೆ ನಂಬರ್ ಹೇಳಲು ಆಗುವುದಿಲ್ಲ. ಹಿಮಾಲಯ ಡಾಬಾದಿಂದ ಸೋಲದೇವನಹಳ್ಳಿ ಪೋಲಿಸ್ ಠಾಣೆಗೆ ಒಂದು ಕಿಮೀ ಅಂತರ ಇದೆ. ಚಾಸಾ-3 ಇವರು ಹೊಯ್ಸಳಕ್ಕೆ ಫೋನ್ ಮಾಡಿ 2-3 ನಿಮಿಷದಲ್ಲಿ ಹೊಯ್ಸಳ ಪೋಲಿಸರು ವಾಹನದಲ್ಲಿ ಡಾಬಾದ ಬಳಿ ಬಂದರು.

5. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ವ್ಯಕ್ತಿಯು ಕಿರುಚಿಕೊಂಡು ಬಂದು ರಕ್ತದ ಮಡುವಿನಲ್ಲಿ ಡಾಬಾದ ಗೇಟ್ ಬಳಿ ಬಿದ್ದಿರಲಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಇನ್ನೊಬ್ಬ ವ್ಯಕ್ತಿಯು ಬಂದು ರಕ್ತದ ಮಡುವಿನಲ್ಲಿ ಡಾಬಾದ ಗೇಟ್ ಬಳಿ ಬಿದ್ದಿರಲಿಲ್ಲ ಹಾಗೂ ನಾನು ವಿಷಯವನ್ನು ಚಾಸಾ-3 ಇವರಿಗೆ ತಿಳಿಸಲಿಲ್ಲ ಹಾಗೂ ಚಾಸಾ-3 ಇವರು ಹೊಯ್ಸಳ ಪೋಲಿಸರಿಗೆ ಫೋನ್ ಮಾಡಿಲ್ಲ ಹಾಗೂ ಹೊಯ್ಸಳ ಪೋಲಿಸರು ಬಂದು ಗಾಯಾಳುಗಳನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಪೋಲಿಸರ ಒತ್ತಾಯದ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು